**ದಿನಾಂಕಃ 22.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ **ಪರ ಶ್ರೀ** ಎಂ.ಎನ್.ಎಸ್ **ವಕೀಲರಿಂದಃ**

ಆರೋಪಿ ಮತ್ತು ನನ್ನ ಬಾಮೈದ ಪ್ರಹ್ಲಾದಗೌಡರವರು ಗ್ರಾಮ ಲೆಕ್ಕಾಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದುದ್ದರಿಂದ ನನ್ನ ಬಾಮೈದನ ಮೂಲಕ ಆರೋಪಿಯು ಪರಿಚಯವಾಗಿರುತ್ತದೆ. ನನಗೆ 4 ವರ್ಷಗಳಿಂದ ಆರೋಪಿಯು ಪರಿಚಿತರಾಗಿರುತ್ತಾರೆ. ಆರೋಪಿಯು ನನಗೆ ತಲಕಾಡಿನಲ್ಲಿ ಪರಿಚಯವಾಗಿರುತ್ತಾರೆ. ನನ್ನ ಬಾಮೈದ ಪ್ರಹ್ಲಾದಗೌಡರವರು ಒಂದು ವರ್ಷದ ಹಿಂದೆ ಮರಣ ಹೊಂದಿರುತ್ತಾರೆ. ಆರೋಪಿಯು ನನಗೆ ಪರಿಚಿತರಾದಾಗ ಆರೋಪಿಯು ಕೆಲಸದಿಂದ ನಿವೃತ್ತಿ ಹೊಂದಿದ್ದರು. ಆರೋಪಿಯು ಯಾವ ಹುದ್ದೆಯಿಂದ ನಿವೃತ್ತರಾದರು ಎಂದು ನನಗೆ ಗೊತ್ತಿಲ್ಲ. ನನ್ನ ಬಾಮೈದ ಪ್ರಹ್ಲಾದಗೌಡರವರು ಗ್ರಾಮ ಲೆಕ್ಕಾಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಆರೋಪಿಯು ಗ್ರಾಮ ಲೆಕ್ಕಾಧಿಕಾರಿಗಳಾಗಿ ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

ದೇವರಾಜು ಎಂಬುವವರು ನಮ್ಮ ಊರಿನವರು ಎಂದರೆ ಸರಿ. ನಂಜನಗೂಡಿನ ಚಂದ್ರು ಬಿನ್ ಬಸಪ್ಪರವರು ನನಗೆ ಗೊತ್ತಿಲ್ಲ. ಸದರಿ ಚಂದ್ರುರವರನ್ನು ನಾನು ನೋಡಿರುವುದಿಲ್ಲ. ದೇವರಾಜು ಎಂಬುವವರು ನಮ್ಮ ಗ್ರಾಮದಲ್ಲಿ ಕೂಲಿ ಮಾಡಿಕೊಂಡು ವಾಸ ಮಾಡುತ್ತಿದ್ದಾರೆ. ನಾನು ವ್ಯವಸಾಯ ಮಾಡುತ್ತೇನೆ. ನಾನು, ದೇವರಾಜು ಮತ್ತು ಚಂದ್ರುರವರು ಆರೋಪಿಯ ಜಮೀನನ್ನು ಹರೀಶ್ ಎಂಬುವವರಿಗೆ ಮಾರಾಟ ಮಾಡಿಸಿ ಸದರಿ ಮಾತುಕತೆಯನ್ನು ನಾವುಗಳೇ ಮಾಡಿ ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಟ್ಟಿದ್ದೆವು ಎಂದರೆ ಸರಿಯಲ್ಲ. ಆರೋಪಿಯ ಜಮೀನಿನ ವಿಚಾರವಾಗಿ ನಾನು, ದೇವರಾಜು ಮತ್ತು ಚಂದ್ರುರವರು ಮಧ್ಯಸ್ಥಿಕೆಗಾರರಾಗಿ ಮಾತುಕತೆ ಮಾಡಿ ದಿನಾಂಕ 27.04.2022 ರಂದು ಆರೋಪಿಯು ಹರೀಶ್ ಎಂಬುವವರಿಗೆ ಕ್ರಯದ ಕರಾರು ಪತ್ರವನ್ನು ನನ್ನ

ಸಮಕ್ಷಮ ಬರೆದುಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯದ ಕರಾರು ಪತ್ರಕ್ಕೆ ದೇವರಾಜುರವರು ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಂಧರ್ಭದಲ್ಲಿ ಆರೋಪಿಯು ಚಂದ್ರುರವರಿಗೆ ರೂ.1,00,000/-ಹಣವನ್ನು ಚೆಕ್ ಮೂಲಕ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ರೂ.1,00,000/-ದ ಚೆಕ್ ಅನ್ನು ಚಂದ್ರುರವರು ನಗದೀಕರಿಸಿಕೊಂಡು ಅದರಲ್ಲಿ ರೂ.50000/-ಹಣವನ್ನು ಚಂದ್ರುರವರು ಇಟ್ಟುಕೊಂಡು ಉಳಿಕೆ ರೂ.50,000/- ಹಣದಲ್ಲಿ ನನಗೆ ರೂ.25,000/- ಹಣವನ್ನು ಮತ್ತು ದೇವರಾಜುರವರಿಗೆ ರೂ.25,000/- ಹಣವನ್ನು ಕಮಿಷನ್ ಬಾಬ್ತು ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ದಿನಾಂಕ 27.04.2022 ರ ಕ್ರಯದ ಕರಾರು ಪತ್ರದ ಪ್ರಕಾರವಾಗಿ ಹರೀಶ್ ರವರು ತಮ್ಮ ಹೆಸರಿಗೆ ಕ್ರಯ ಪತ್ರವನ್ನು ಮಾಡಿಸಿಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಂತರ ಹರೀಶ್ ರವರು ಸದರಿ ಕ್ರಯ ಪತ್ರವನ್ನು ತಮ್ಮ ಸಂಬಂಧಿಯಾದ ಮುನಿರಾಜುರವರಿಗೆ ದಿನಾಂಕ 29.08.2022 ರಂದು ಆರೋಪಿಯಿಂದ ಕ್ರಯ ಪತ್ರ ಬರೆಸಿಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕ 29.08.2022 ರಂದು ಕ್ರಯ ಪತ್ರ ನೊಂದಣಿ ಆದಾಗ ಉಳಿಕೆ ಕ್ರಯದ ಬಾಬ್ತು ರೂ.700000/-ಹಣವನ್ನು ಮುನಿರಾಜುರವರು ಆರೋಪಿ ಪ್ರಸನ್ನ ಮೂರ್ತಿರವರಿಗೆ ಚೆಕ್ ಮೂಲಕ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಪ್ರಸನ್ನಮೂರ್ತಿರವರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ತಮ್ಮ ಬ್ಯಾಂಕ್ ಖಾತೆಗೆ ಸಲ್ಲಿಸಿದರು ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ ಮುನಿರಾಜುರವರ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಸದರಿ ಚೆಕ್‌ಅನ್ನು ಬ್ಯಾಂಕ್ ನವರು ಹಿಂದಿರುಗಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಆರೋಪಿಯು ಮುನಿರಾಜುರವರ ವಿರುದ್ಧ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದರು ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ ಮುನಿರಾಜುರವರು ತಾವು ಚೆಕ್ ಮೂಲಕ ಆರೋಪಿಗೆ ನೀಡಿದ್ದ ರೂ.700000/- ಹಣವನ್ನು ಪಾವತಿಸಲು ಸಾಧ್ಯವಾಗದ ನಂತರ ಸದರಿ ಮುನಿರಾಜುರವರು ದಿನಾಂಕ 03.04.2023 ರಂದು ದಿನಾಂಕ

29.08.2022 ರ ಕ್ರಯ ಪತ್ರವನ್ನು ರದ್ದು ಪಡಿಸಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕ 03.04.2023 ರಂದು ಕ್ರಯ ಪತ್ರ ರದ್ದಾದ ನಂತರ ಆರೋಪಿಯು ಸದರಿ ಕ್ರಯ ಪತ್ರದ ಮೂಲಕ ಪಡೆದುಕೊಂಡಿದ್ದ ಹಣವನ್ನು ಮುನಿರಾಜುರವರಿಗೆ ವಾಪಸ್ಸು ನೀಡಿದರು ಎಂದರೆ ನನಗೆ ಗೊತ್ತಿಲ್ಲ.

ನಂತರ ದಿನಾಂಕ 10.10.2022 ರಂದು ಆರೋಪಿಯು ದಿನಾಂಕ 29.08.2022 ರ ಕ್ರಯದ ವ್ಯವಹಾರದ ಕಮಿಷನ್ ಬಾಬ್ತು ತಲಾ ರೂ.25,000/-ಹಣವನ್ನು ನನಗೆ ಮತ್ತು ದೇವರಾಜುರವರಿಗೆ ಉಮ್ಮತ್ತೂರು ಗ್ರಾಮದ ಆರೋಪಿಯ ಮನೆಯಲ್ಲಿ ಎರಡು ಚೆಕ್ ಗಳನ್ನು ನೀಡಿದ್ದರು ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಕಮಿಷನ್ ಬಾಬ್ತು ಯಾವುದೇ ಚೆಕ್ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿದಾರರಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿದಾರರು ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಭಾವಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ನಿಡಿ-1 ರ ಭಾವಚಿತ್ರದಲ್ಲಿ ನಾನು ಮತ್ತು ದೇವರಾಜುರವರು ಆರೋಪಿಯ ಮನೆಯಲ್ಲಿ ಕುಳಿತಿರುತ್ತೇವೆ. ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ಚೆಕ್ ಸಂಖ್ಯೆ 424362 ಆಗಿರುತ್ತದೆ. ಸಾಕ್ಷಿದಾರರಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿದಾರರು ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಭಾವಚಿತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರ ಭಾವಚಿತ್ರದಲ್ಲಿರುವ ಚೆಕ್ ಈ ಪ್ರಕರಣದಲ್ಲಿರುವ ಚೆಕ್ ಆಗಿರುತ್ತದೆ.

ದಿನಾಂಕ 10.10.2022 ರಂದು ಆರೋಪಿಯು ದಿನಾಂಕ 29.08.2022 ರ ಕ್ರಯ ಪತ್ರದ ಬಾಬ್ತು ನನಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ 424362 ಚೆಕ್ ಸಂಖ್ಯೆಯ ಮೂಲಕ ರೂ.25,000/- ಕಮಿಷನ್ ಹಣವನ್ನು ಚೆಕ್ ಮೂಲಕ ನೀಡಿದ್ದರು ಎಂದರೆ ಸರಿಯಲ್ಲ. ಅದೇ ದಿನ ಸದರಿ ಕ್ರಯ ಪತ್ರದ ಬಾಬ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ 424361 ಚೆಕ್ ಸಂಖ್ಯೆಯ ಮೂಲಕ ರೂ.25,000/- ಕಮಿಷನ್

ಹಣವನ್ನು ಚೆಕ್ ಮೂಲಕ ಆರೋಪಿಯು ದೇವರಾಜುರವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಅದೇ ದಿನ ಸದರಿ ಕ್ರಯ ಪತ್ರದ ಬಾಬ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ 424360 ಚೆಕ್ ಸಂಖ್ಯೆಯ ಮೂಲಕ ರೂ.50,000/- ಕಮಿಷನ್ ಹಣವನ್ನು ಚೆಕ್ ಮೂಲಕ ಆರೋಪಿಯು ಚಂದ್ರುರವರಿಗೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಕಂಡ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯು ಒಂದು ವರ್ಷದ ಹಿಂದೆ ತಲಕಾಡಿನ ನನ್ನ ಬಾಮೈದನನ ಮನೆಗೆ ಬಂದಾಗ ನನ್ನ ಬಳಿ ಹಣವನ್ನು ಸಾಲ ಕೇಳಿರುತ್ತಾರೆ. ನಾನು ಆರೋಪಿಗೆ ಯಾವ ದಿನಾಂಕದಂದು ಹಣವನ್ನು ಸಾಲವಾಗಿ ನೀಡಿದ್ದೇನೆ ಎಂದು ದಿನಾಂಕ ನೆನಪಿಲ್ಲ. ನಾನು ರೂ.25000/-ಹಣವನ್ನು ನನ್ನ ಬಾಮೈದ ಪ್ರಹ್ಲಾದಗೌಡರವರ ಮನೆಯಲ್ಲಿ ನಗದಾಗಿ ಆರೋಪಿಗೆ ನೀಡಿರುತ್ತೇನೆ. ಸದರಿ ಸಂಧರ್ಭದಲ್ಲಿ ನಾನು, ಆರೋಪಿ ಮತ್ತು ನನ್ನ ಬಾಮೈದ ಹಾಜರಿದ್ದೆವು. ಆರೋಪಿಯು ಅವರ ಮನೆಯಲ್ಲಿ ನಮಗೆ ಈ ಪ್ರಕರಣದ ಬಾಬ್ತು ಚೆಕ್ ಅನ್ನು ನೀಡಿರುತ್ತಾರೆ. ಆರೋಪಿಯು ಯಾವ ದಿನಾಂಕದಂದು ಚೆಕ್ ನೀಡಿದ್ದರು ಎಂದು ನನಗೆ ನೆನಪಿಲ್ಲ. ಆರೋಪಿಯು ದೇವರಾಜು ಎಂಬುವವರಿಂದ ಯಾವಾಗ ಹಣವನ್ನು ಸಾಲ ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದೇವರಾಜುರವರು ಆರೋಪಿಗೆ ಹಣವನ್ನು ನೀಡಿದ ಒಂದು ವಾರದ ನಂತರ ನಾನು ಆರೋಪಿಗೆ ಹಣವನ್ನು ಸಾಲವಾಗಿ ನೀಡಿರುತ್ತೇನೆ. ಆರೋಪಿಯು ದೇವರಾಜುರವರಿಂದ ಸಾಲ ಪಡೆದುಕೊಂಡಿರುವ ವಿಚಾರವನ್ನು ದೇವರಾಜುರವರು ನನಗೆ ತಿಳಿಸಿರುವುದಿಲ್ಲ. ನಾನು ಹೇಳಿದಂತೆ ಆರೋಪಿಯು ನನ್ನಿಂದ ಯಾವುದೇ ಹಣವನ್ನು ಸಾಲವಾಗಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಪಿರ್ಯಾದಿಯಲ್ಲಿ ನಮೂದಿಸಿರುವಂತೆ ದಿನಾಂಕ 07.06.2023 ರಂದು ಆರೋಪಿಯು ನನಗೆ ಯಾವುದೇ ಚೆಕ್ ಅನ್ನು ನೀಡಿಲ್ಲ ಎಂದರೆ

ಸರಿಯಲ್ಲ. ಆರೋಪಿಯು ಉಪ ತಹಸೀಲ್ದಾರರಾಗಿ ನಿವೃತ್ತಿ ಹೊಂದಿದ್ದಾರೆ ಎಂದರೆ ಸರಿ. ಆರೋಪಿಗೆ ತಿಂಗಳಿಗೆ ರೂ.45,000/-ಪಿಂಚಣಿ ಬರುತ್ತದೆ ಎಂದರೆ ಸರಿ. ಆರೋಪಿಯ ಮಗ ವಿಧಾನಸೌಧದಲ್ಲಿ ಮುಖ್ಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಆರೋಪಿಯ ಮಗಳು ಸಹ ಪ್ರಾಧ್ಯಪಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಪಿಂಚಣಿ ಬರುವುದರಿಂದ ಮತ್ತು ಆರೋಪಿಯ ಮಕ್ಕಳು ಒಳ್ಳೆಯ ಕೆಲಸದಲ್ಲಿ ಇದ್ದು ಒಳ್ಳೆಯ ಸಂಬಳವನ್ನು ಪಡೆಯುತ್ತಿರುವುದರಿಂದ ಆರೋಪಿಗೆ ನನ್ನಿಂದ ರೂ.25,000/-ಹಣವನ್ನು ಸಾಲವಾಗಿ ಪಡೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ತಮ್ಮ ತೋಟದಲ್ಲಿ ಮನೆಯನ್ನು ನಿರ್ಮಿಸಿರುತ್ತಾರೆ. ಸದರಿ ತೋಟವು ಸುಮಾರು 2 ಎಕರೆ 20 ಗುಂಟೆ ಇರಬಹುದು. ಆರೋಪಿಯು ಹಣಕಾಸಿನ ವಿಚಾರದಲ್ಲಿ ಮತ್ತು ಆರ್ಥಿಕವಾಗಿ ಚೆನ್ನಾಗಿರುವುದರಿಂದ ನನ್ನ ಬಳಿ ಹಣವನ್ನು ಸಾಲವಾಗಿ ಪಡೆಯುವ ಅವಶ್ಯಕತೆ ಆರೋಪಿಗೆ ಇಲ್ಲ ಎಂದರೆ ಸರಿಯಲ್ಲ. ದಿನಾಂಕ 06.04.2023 ರಂದು ಆರೋಪಿ ಯು ತಮ್ಮ ಜಮೀನನ್ನು ಬೇರೆ ವ್ಯಕ್ತಿಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಜಮೀನನ್ನು ಮಾರಾಟ ಮಾಡಿಸುವ ವಿಚಾರದಲ್ಲಿ ನಾನು ಮತ್ತು ದೇವರಾಜುರವರು ಕಮಿಷನ್ ಹಣವನ್ನು ಚೆಕ್ ಮೂಲಕ ಪಡೆದುಕೊಂಡು ಸದರಿ ಚೆಕ್ ಗಳನ್ನು ವಾಪಸ್ಸು ನೀಡದೆ ಈ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ